## ಕರ್ನಾಟಕ ವಿಧಾನ ಪರಿಷತ್ತು
### ಲಘು ಪ್ರಕಟಣೆ ಭಾಗ –2

**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**
**ಶುಕ್ರವಾರ, ದಿನಾಂಕ: 28ನೇ ಏಪ್ರಿಲ್, 2023**

**ಸಂಖ್ಯೆ: 17**

ಕರ್ನಾಟಕ ಲೋಕಾಯುಕ್ತ 1985ರ ನಿಯಮ 7ನ್ನು ತಿದ್ದುಪಡಿ ಮಾಡಿ "ಸೆಕ್ಷನ್ 22ರ ಅಡಿಯಲ್ಲಿ ಆಸ್ತಿ ಮತ್ತು ದಾಯಿತ್ವಗಳ ಹೇಳಿಕೆಯನ್ನು ನಮೂನೆ–IV ರಲ್ಲಿ ಕರ್ನಾಟಕ ಲೋಕಾಯುಕ್ತ ಜಾಲತಾಣದ ಮೂಲಕ ಸಲ್ಲಿಸತಕ್ಕದ್ದು" ಎಂದು ದಿನಾಂಕ:06.12.2021ರಂದು ಸಂಖ್ಯೆ:ಸಿಆಸುಇ/55/ ಸೇಲೋಯು/2021, ಅನ್ವಯ ಸರ್ಕಾರವು ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಸದರಿ ಅಧಿಸೂಚನೆಯಂತೆ, ಶಾಸಕಾಂಗದ ಸದಸ್ಯರು ಆನ್‌ಲೈನ್ ಮುಖಾಂತರ ಆಸ್ತಿದಾಯಿತ್ವ ಪಟ್ಟಿಯ ಮಾಹಿತಿಯನ್ನು ಸಲ್ಲಿಸುವುದು ಕಡ್ಡಾಯವಾಗಿರುವುದರಿಂದ, ಸದರಿ ಪ್ರಕ್ರಿಯೆಗೆ ಎನ್.ಐ.ಸಿ (ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರ) ಬೆಂಗಳೂರು ಇವರು ತಂತ್ರಾಂಶದ ಅಭಿವೃದ್ಧಿ ಕಾರ್ಯವನ್ನು ಕೈಗೊಂಡಿರುತ್ತಾರೆ. ತಂತ್ರಾಂಶದ ಅಭಿವೃದ್ಧಿ ಕಾರ್ಯವು ಬಹುತೇಕ ಪೂರ್ಣಗೊಂಡಿದ್ದು, ಶಾಸಕಾಂಗದ ಸದಸ್ಯರು ಆನ್‌ಲೈನ್ ಮುಖಾಂತರ ಆಸ್ತಿದಾಯಿತ್ವ ಪಟ್ಟಿಯ ಮಾಹಿತಿಯನ್ನು ಸಲ್ಲಿಸುವ ಪ್ರಕ್ರಿಯೆಗೆ eSIGN ಸೌಲಭ್ಯವನ್ನು ಬಳಸಿಕೊಳ್ಳಲು, ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು, ಈ– ಆಡಳಿತ ಕೇಂದ್ರ ಬೆಂಗಳೂರು ಇವರಿಂದ ಅನುಮತಿ ದೊರೆತ ತಕ್ಷಣ ಕರ್ನಾಟಕ ಲೋಕಾಯುಕ್ತದ ಅಧಿಕೃತ ಜಾಲತಾಣದಲ್ಲಿ ತಂತ್ರಾಂಶವನ್ನು ಅಳವಡಿಸಲಾಗುವುದು. **ಕರ್ನಾಟಕ ಲೋಕಾಯುಕ್ತ ಜಾಲತಾಣದಲ್ಲಿ ತಂತ್ರಾಂಶವನ್ನು ಅಳವಡಿಸುವವರೆಗೆ, ಶಾಸಕರು ಮತ್ತು ಸಚಿವರು 2022–23ನೇ ಸಾಲಿಗಾಗಿ ಕರ್ನಾಟಕ ಲೋಕಾಯುಕ್ತ ಕಛೇರಿಗೆ ಭೌತಿಕವಾಗಿ ಆಸ್ತಿ ಮತ್ತು ದಾಯಿತ್ವ ಪಟ್ಟಿಯ ಮಾಹಿತಿಯನ್ನು ಸಲ್ಲಿಸಿದ್ದಲ್ಲಿ ಅವುಗಳನ್ನು ಸ್ವೀಕರಿಸಲಾಗುವುದು.**

ಎನ್.ಐ.ಸಿ (ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರ) ಬೆಂಗಳೂರು ರವರಿಂದ ತಂತ್ರಾಂಶದ ಅಭಿವೃದ್ಧಿ ಕಾರ್ಯವು ಪೂರ್ಣಗೊಂಡು ಕರ್ನಾಟಕ ಲೋಕಾಯುಕ್ತ ಜಾಲತಾಣದಲ್ಲಿ ತಂತ್ರಾಂಶವನ್ನು ಅಳವಡಿಸಿದ ನಂತರ, ಸರ್ಕಾರವು ದಿನಾಂಕ:06.12.2021ರ ಅಧಿಸೂಚನೆ ಸಂಖ್ಯೆ:ಸಿಆಸುಇ/55/ಸೇಲೋಯು/2021 ರನ್ವಯ ಶಾಸಕರು ಮತ್ತು ಸಚಿವರು 2022–23ನೇ ಸಾಲಿಗಾಗಿ ಸಲ್ಲಿಸುವ ಆಸ್ತಿ ಮತ್ತು ದಾಯಿತ್ವ ಪಟ್ಟಿಯ ಮಾಹಿತಿಯನ್ನು ಕರ್ನಾಟಕ ಲೋಕಾಯುಕ್ತ ಜಾಲತಾಣದ ಮೂಲಕ ಸಲ್ಲಿಸಬೇಕೆಂದು ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು, ಇವರು ತಮ್ಮ ಪತ್ರದಲ್ಲಿ ತಿಳಿಸಿರುತ್ತಾರೆ ಎಂದು ಈ ಮೂಲಕ ಮಾನ್ಯ ಶಾಸಕರುಗಳ ಗಮನಕ್ಕೆ ತರಲಾಗಿದೆ.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ,**